ಈ ದಿನ ದಿನಾಂಕಃ 10-10-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್ ಆರ್ ಆರ್ ವಕೀಲರಿಂದಃ**

ನನ್ನ ತಾಯಿ ರತ್ನಮ್ಮನಿಗೆ ಕಣ್ಣು ಮತ್ತು ಕಿವಿ ಚೆನ್ನಾಗಿ ಕಾಣಿಸುತ್ತದೆ ಮತ್ತು ಕೇಳಿಸುತ್ತದೆ ಎಂದರೆ ಸರಿ. ಅದೇ ರೀತಿ ಅವರು ಚೆನ್ನಾಗಿ ಓಡಾಡುತ್ತಾರೆ ಎಂದರೆ ಸಾಕ್ಷಿ ಅವರ ಆರೋಗ್ಯ ಚೆನ್ನಾಗಿಲ್ಲ ಎಂದು ನುಡಿಯುತ್ತಾರೆ. ವಾದ ಪತ್ರದ 2 ನೇ ಪ್ಯಾರದಲ್ಲಿ ಮತ್ತು ನಿಪಿ-6ರಲ್ಲಿ ಉಲ್ಲೇಖಿಸಿದಂತೆ ದಾವಾ ಎ ಷೆಡ್ಯೂಲ್ ಆಸ್ತಿಯ ಉತ್ತರ ಭಾಗಕ್ಕೆ ನಾರಾಯಣಪ್ಪ ಇವರ ಜಮೀನು ಎಂದು ಉಲ್ಲೇಖವಿದೆ ಎಂದರೆ ಸರಿ. ಸದರಿ ನಾರಾಯಣಪ್ಪನವರ ಜಮೀನಿನ ಉತ್ತರ ಭಾಗಕ್ಕೆ ರುದ್ರಪ್ಪ ಬಿನ್ ದೇವೆಂದ್ರಪ್ಪನವರ ಜಮೀನು ಬರುತ್ತದೆ ಎಂದರೆ ಸರಿ. ತದ ನಂತರ 3ನೇ ಪೋಡು ಆಸ್ತಿ ಪ್ರತಿವಾದಿಗಳ ಆಸ್ತಿ ಬರುತ್ತದೆ ಎಂದರೆ ಸರಿ. ಹಾಗಾಗಿ ದಾವಾ ಎ ಷೆಡ್ಯೂಲ್ ಆಸ್ತಿಗೂ ಪ್ರತಿವಾದಿಗಳ ಆಸ್ತಿಯೂ ಒಂದಕ್ಕೊಂದು ಹೊಂದಿಕೊಂಡಿಲ್ಲ ಎಂದರೆ ಸರಿ. ಹಾಗಾಗಿ ಪ್ರತಿವಾದಿಗಳು ನಮ್ಮ ಜಮೀನಿನಲ್ಲಿ ಯಾವುದೇ ಆಸ್ತಿಯನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಎ ಷೆಡ್ಯೂಲ್ ಆಸ್ತಿಯ ಉತ್ತರ ದಿಕ್ಕಿಗೆ ಇರುವ ನಾರಾಯಣಪ್ಪ ಮತ್ತು ರುದ್ರಪ್ಪನವರನ್ನು ಈ ದಾವೆಗೆ ಪಕ್ಷಗಾರರಾಗಿ ಸೇರಿಸಿಲ್ಲ ಎಂದರೆ ಸಾಕ್ಷಿ ಸದರಿಯವರು ಯಾವುದೇ ತಕರಾರು ಮಾಡಿಲ್ಲ ಮತ್ತು ಒತ್ತುವರಿ ಜಮೀನನ್ನು ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ-11 ರಲ್ಲಿ ಉಲ್ಲೇಖವಿರುವಂತೆ ದಾವಾ ಎ ಷೆಡ್ಯೂಲ್ ಆಸ್ತಿಯ ಒತ್ತುವರಿಯಾದ ಬಿ ಷೆಡ್ಯೂಲ್ ಆಸ್ತಿಯನ್ನು ಸರ್ವೆ ನಂ 4 ರಲ್ಲಿನ ಹಿಡುವಳಿದಾರರು ಒತ್ತುವರಿ ಮಾಡಿರುತ್ತಾರೆ ಎಂದು ಉಲ್ಲೇಖವಿದೆ ಎಂದರೆ ಸರಿ. ನಾವು ಸಹ ಸದರಿ ಸರ್ವೆ ನಂ 4 ರಲ್ಲಿ ಬರುತ್ತೇವೆ ಎಂದರೆ ಸರಿಯಲ್ಲ. ನಿಪಿ-11ರಲ್ಲಿ ಪ್ರತಿವಾದಿಗಳೇ ದಾವಾ ಬಿ

ಷೆಡ್ಯೂಲ್ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ ಎಂದು ಭೂಮಾಪಕರು ನಿಪಿ-11 ರಲ್ಲಿ ಉಲ್ಲೇಖಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸರ್ವೆ ನಂ 4 ರಲ್ಲಿನ ಹಿಡುವಳಿದಾರರು ಎಂದು ನಮೂದಿಸಿದ್ದಾರೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಈಗ 2025-26 ನೇ ಸಾಲಿನ ತೊಪ್ಪೆನಹಳ್ಳಿ ಗ್ರಾಮದ ಸರ್ವೆ ನಂ 4/1ರಲ್ಲಿನ ಪಹಣಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲೆಯ ಪ್ರಕಾರ 1ನೇ ಪ್ರತಿವಾದಿ ಸರ್ವೆ ನಂ 4/1ರಲ್ಲಿ 1 ಎಕರೆ 2 ಗುಂಟೆ ಜಮೀನು ಇದೆ ಎಂದು ಒಪ್ಪಿರುತ್ತಾರೆ. ಅದನ್ನು **ನಿಡಿ-1** ಎಂದು ಗುರುತಿಸಲಾಯಿತು. ನನ್ನ ವಾದಪತ್ರದ 4ನೇ ಪ್ಯಾರದಲ್ಲಿ ಸರ್ವೆ ನಂ 5/3 ರ ಜಮೀನು ಸರ್ವೆ ನಂ 5/4 ಅಗಿ ಪೋಡು ದುರಸ್ತಿಯಂತೆ ಬದಲಾಗಿದೆ ಎಂದರೆ ಸರಿ. ಸದರಿ ಪೋಡು ದುರಸ್ತಿಯಾದ ಕುರಿತು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಎ ಷೆಡ್ಯೂಲ್ ಆಸ್ತಿಯಾದ ಸರ್ವೆ ನಂ 5/4ರಲ್ಲಿ 1 ಎಕರೆ 26.12 ಗುಂಟೆ ಹಿಡುವಳಿ ಜಮೀನು ಇದ್ದು ಉಳಿದ 22 ಗುಂಟೆ ಜಮೀನು ಕರಾಬು ಇದೆ ಎಂದರೆ ಸರಿ. ಸದರಿ ಕರಾಬು ಜಮೀನಿನಲ್ಲಿ ಹೊಸಕಟ್ಟೆ ಹಳ್ಳ ಇದೆ ಎಂದರೆ ಸಾಕ್ಷಿ ಬಾಯಿ ಮಾತಿನಲ್ಲಿ ಇದೆ ದಾಖಲೆಗಳಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಹಳ್ಳವನ್ನು ನಾವು ಉಳುಮೆ ಮಾಡುತ್ತಿದ್ದೆವೆ ಎಂದರೆ ಸರಿ. ಸದರಿ ಹಳ್ಳದಿಂದ ತೊಪ್ಪೇನಹಳ್ಳಿ ಗ್ರಾಮಸ್ಥರು ಮತ್ತು ಪ್ರತಿವಾದಿಗಳು ಪೈಪ್ ಲೈನ್ ಮುಖಾಂತರ ತಮ್ಮ ಜಮೀನುಗಳಿಗೆ ನೀರನ್ನು ಹಾಯಿಸಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಯಾವುದೇ ಅಧಿಕೃತ ಪೈಪ್ ಲೈನ್ ಇಲ್ಲ ಎಂದು ನುಡಿಯುತ್ತಾರೆ.

ಕರಾಬು ಜಮೀನನ್ನು ನಾನು ಒತ್ತುವರಿ ಮಾಡಿ ಸಾಗು ಮಾಡುತ್ತಿದ್ದು, ಪ್ರತಿವಾದಿಗಳು ನನ್ನ ಜಮೀನಿನಲ್ಲಿ ಒತ್ತುವರಿ ಮಾಡಿರುತ್ತಾರೆ ಎಂದು ಸುಳ್ಳು ದಾವೆ ಹೂಡಿದ್ದೆನೆ ಎಂದರೆ ಸರಿಯಲ್ಲ. ನಾನು ಭೂಮಾಪಕರೊಂದಿಗೆ ಸರೀಕಾಗಿ ನಿಪಿ-9 ರಿಂದ 11 ರಂತೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

OS.No. 3/2024
PW-1

ನನ್ನ ತಂದೆ 2006ನೇ ಸಾಲಿನಲ್ಲಿ ನಿಪಿ-6ರಂತೆ ನೊಂದಾಯಿತ ವಿಭಾಗಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಾನು ನನ್ನ ವಾದಪತ್ರದ 2ನೇ ಪ್ಯಾರದಲ್ಲಿ ಸದರಿ ನಿಪಿ-6 ರ ಸಮಯಕ್ಕೆ ಯಾವುದೇ ಅಳತೆ ಮಾಡಿಸಿರುವುದಿಲ್ಲ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಸರ್ವೆ ನಂ 4/1ರಲ್ಲಿನ ಖಾತೆದಾರರಾದ ಸುಮಿತ್ರಮ್ಮ ಕೋಂ ತಿಮ್ಮಪ್ಪ , ಶಿವಾನಂದಪ್ಪ ಬಿನ್ ತಿಮ್ಮಪ್ಪರವರು ಊರಿನಲ್ಲಿ ಇಲ್ಲ ಎಂದು ನಾನು ದಾವೆಯಲ್ಲಿ ನಮೂದಿಸಿದ್ದೆನೆ ಎಂದರೆ ಸರಿ. ಸದರಿ ಶಿವಾನಂದಪ್ಪನು ತನ್ನ ತಾಯಿ ಮೃತಪಟ್ಟ ತರುವಾಯ ತನ್ನ ತಾಯಿಯ ಮೂಲಕ ಬಂದಂತಹ 22 ಗುಂಟೆ ಆಸ್ತಿಯನ್ನು ವಾರಸದಂತೆ ಉಳುಮೆ ಮಾಡುತ್ತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನು ಸಹ ಸರ್ವೆ ನಂ 4/1 ರಲ್ಲಿ ಬರುತ್ತದೆ ಎಂದರೆ ಸರಿ. ಸದರಿಯವರು ಒತ್ತುವರಿ ಮಾಡಿದ ಕುರಿತು ನಿಪಿ-11 ರಲ್ಲಿ ಉಲ್ಲೇಖವಿಲ್ಲ ಎಂದರೆ ಸಾಕ್ಷಿ ನಾನು ಅರ್ಜಿ ಸಲ್ಲಿಸುವ ಸಮಯಕ್ಕೆ ಸದರಿಯವರ ಹೆಸರಿನಲ್ಲಿ ಪಹಣಿ ಇರಲಿಲ್ಲ ಎಂದ ನುಡಿಯುತ್ತಾರೆ.

ನಾನು ದಿಃ02-12-2023 ನಿಪಿ-12 ರಂತೆ ಪ್ರತಿವಾದಿಗಳ ವಿರುದ್ದ ದಾಖಲಿಸಿರುವ ದೂರು ಸುಳ್ಳು ಎಂದರೆ ಸರಿಯಲ್ಲ. ಸದರಿ ನಿಪಿ-12 ರಿಂದ 14ರ ದಾಖಲೆಗಳು 2023 ನೇ ಸಾಲಿಗೆ ಸಂಬಂಧಿಸಿದ್ದು, ನನಗೆ ಪ್ರಸ್ತುತ ದಾವೆಯನ್ನು ನ್ಯಾಯಾಲಯದಲ್ಲಿ ದಾಖಲಿಸಲು ಯಾವುದೇ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ಕರಾಬು ಜಮೀನು ಸರ್ಕಾರಕ್ಕೆ ಮತ್ತು ಕಂದಾಯ ಇಲಾಖೆಗೆ ಸೇರಿದ ಜಮೀನು ಎಂದರೆ ಸರಿ. ಹಾಗಿದ್ದರು ಸಹ ನಾನು ಸದರಿ ಕರಾಬು ಜಮೀನನ್ನು ಅನಧಿಕೃತವಾಗಿ ಸಾಗುಮಾಡುತ್ತಿದ್ದು, ಅದರಲ್ಲಿ 7 ವರೆ ಗುಂಟೆಯಾದ ದಾವಾ ಬಿ ಷೆಡ್ಯೂಲ್ ಜಮೀನಿಗೆ ಮಾಲೀಕನೆಂದು ಘೋಷಣಾತ್ಮಕ ಪರಿಹಾರ ಕೋರಿ ಹೂಡಿರುವ ಪ್ರಸ್ತುತ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆಯಾವುದೇ ರೀತಿಯಲಿಲತೊಂದರೆ ಕೊಡದೇ ಇದ್ದರು ಸಹ ಸದರಿ ದಾವಾ ಬಿ ಷೆಡ್ಯೂಲ್ ಜಮೀನನ್ನು ಕಬಳಿಸಲು ನಾನು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

OS.No. 3/2024
PW-1

**<u>ಮರು ವಿಚಾರಣೆಃ ಇರುವುದಿಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.